ದಿನಾಂಕಃ 07-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋಧಿಸಲಾಯಿತು.

*ಮುಂದುವರೆದ ಪಾಟೀ ಸವಾಲುಃಃ ಆರೋಪಿ ಪರ ವಕೀಲರಾದ ಎನ್ ವಿ ರವರಿಂದ*

4. ಹೊಸೂರಿನ ಕೆನರಾ ಬ್ಯಾಂಕ್ ನಲ್ಲಿ ನನ್ನ Specimen Signature ಇದೆ ಎಂದರೆ ಸರಿ. ನಿಪಿ-2 ರಲ್ಲಿ Funds Insufficient ಎಂಬುದಕ್ಕೆ ಗುರುತು ಮಾಡಲಾಗಿದೆ ಎಂದರೆ, ಸಾಕ್ಷಿಯು ನನ್ನ ಸಮಕ್ಷಮ ಆಗಿಲ್ಲ, ಸದರಿ ಕಾರಣ ಆ ಬಗ್ಗೆ ಹೇಳಲು ನನ್ನಿಂದ ಸಾಧ್ಯವಿಲ್ಲ ಎಂದು ನುಡಿದಿರುತ್ತಾರೆ. ನಿಪಿ-1 ರ ಚೆಕ್ ನ ಬಗ್ಗೆ ಗೊತ್ತಿಲ್ಲದ ಕಾರಣ ಆ ಸಮಯದಲ್ಲಿ ಅದರಲ್ಲಿನ ಸಹಿ ನನ್ನದಲ್ಲ ಎಂದು ನಾನು ಹೇಳಿರಲಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿಯೂ ಸಹ ಸಹಿ ನನ್ನದಲ್ಲ ಎಂದು ಹೇಳಿಲ್ಲ ಎಂದರೆ ಸರಿ. ನನ್ನ ಹಾಗೂ ಹೊಸೂರಿನ ಕೆನರಾ ಬ್ಯಾಂಕ್ ಸಿಬ್ಬಂದಿಗಳ ಮಧ್ಯೆ ಯಾವುದೇ ವೈ ಮನಸ್ಸು ಇಲ್ಲ ಎಂದರೆ ಸರಿ. ದಿನಾಂಕಃ 15-09-2011 ಮತ್ತು ದಿನಾಂಕ 11-11-2011 ರಂದು ನನ್ನ ಖಾತೆಯಲ್ಲಿ ಹಣ ಇತ್ತು ಎಂದು ತೋರಿಸುವ ಸಲುವಾಗಿ ನಾನು ಯಾವುದೇ ದಾಖಲೆ ನೀಡಿರುವುದಿಲ್ಲ. ಉಗ್ರಪ್ಪನವರು ನನಗೆ ಸಾಕಷ್ಟು ತೊಂದರೆ ಕೊಟ್ಟಿದ್ದ ಹಾಗೂ ಈಗಲೂ ಕೊಡುತ್ತಿರುವ ಕಾರಣ ಅವರ ವಿರುದ್ಧ ಯಾವುದೇ ದೂರು ನೀಡಿರುವುದಿಲ್ಲ. ನಾನು ಪಿರ್ಯಾದಿದಾರರ ವಿರುದ್ಧ ಅವರು ಉಗ್ರಪ್ಪನವರಿಂದ ನನ್ನ ಚೆಕ್ ಪಡೆದು ಪ್ರಕರಣ ದಾಖಲು ಮಾಡಿರುತ್ತಾರೆ ಎಂದು ಯಾವುದೇ ದೂರು ನೀಡಿರುವುದಿಲ್ಲ. ನಾನು ಪಿರ್ಯಾದಿದಾರರಿಂದ ಹಣ ಪಡೆದು ಅದನ್ನು ವಾಪಸ್ಸು ನೀಡಬೇಕಾಗಿದ್ದ ಕಾರಣ ಅವರ ಮೇಲೆ ಯಾವುದೇ ಪ್ರಕರಣ ದಾಖಲು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

5. ನಿಡಿ-2 ರ ಮೂಲಕ ಹಾಜರುಪಡಿಸಿರುವ ದಾಖಲೆಗಳು ಪಿರ್ಯಾದಿದಾರರಿಗೆ ಸಂಬಂದ ಪಟ್ಟ ದಾಖಲಗೆಳು ಎಂದು ಕೇಳಲಾಗಿ ಸಾಕ್ಷಿಯು ಹಣ ನೀಡುವಾಗ ದಾಖಲೆಯನ್ನು ಪಡೆದು ನೀಡಬೇಕು ಎಂದು ತೋರಿಸುವ ಸಲುವಾಗಿ ನೀಡಿದ್ದೇನೆ ಎಂದು ನುಡಿದಿರುತ್ತಾರೆ. ಪಿರ್ಯಾದಿದಾರರು ನನಗೆ ಹಣ ನೀಡಿದ್ದ ಕಾರಣ ಚೆಕ್ ಪಡೆದಿದ್ದಾರೆ, ಅದೇ ದಾಖಲೆಯಾಗಿರುತ್ತದೆ ಎಂದರೆ ಸರಿಯಲ್ಲ. ಪಿರ್ಯಾದಿದಾರರಿಂದ ಹಣ ಬರಬೇಕು ಎಂದು ಯಾರು ಸಹ ದೂರು ದಾಖಲಸಿರುವುದಿಲ್ಲ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ದಿನಾಂಕ 15-03-2011 ರಂದು ನನಗೆ ನಗದು ಮೂಲಕ ಹಣ ನೀಡಿರುವ ಸಲುವಾಗಿ ನಾನು ದಿನಾಂಕ 15-09-2011 ರಂದು ಸದರಿ ಹಣದ ಮರುಪಾವತಿಗಾಗಿ ಚೆಕ್ ಅನ್ನು ಪಿರ್ಯಾದಿದಾರರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. 09-11-2011 ರಂದು ಪಿರ್ಯಾದಿದಾರರು ಚೆಕ್ ಅನ್ನು ನಗದೀಕರಣಕ್ಕಾಗಿ ಹಾಜರುಪಡಿಸವಂತೆ ನಾನು ತಿಳಿಸಿದ ಕಾರಣ ಪಿರ್ಯಾದಿದಾರರು ಹಾಜರುಪಡಿಸಿದ್ದು ದಿನಾಂಕ 11-11-2011 ರಂದು ನನ್ನ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಸದರಿ ಚೆಕ್ ವಾಪಸ್ಸು ಬಂದಿರುತ್ತದೆ ಎಂದರೆ ಸರಿಯಲ್ಲ. ನಂತರ ದಿನಾಂಕ 16-11-2011 ರಂದು ಪಿರ್ಯಾದಿದಾರರು ನನಗೆ ಅವರ ವಕೀಲರ ಮೂಲಕ ನೋಟೀಸ್ ನೀಡಿರುತ್ತಾರೆ ಎಂದರೆ ಸರಿ.

6. ನಾನು 2011 ರಲ್ಲಿ ನನಗೆ ಸೇರಿದ ಕಲ್ಯಾಣ ಮಂಟಪ್ಪಕ್ಕೆ ಸಂಬಂದಿಸಿದಂತೆ ತೆರಿಗೆಯನ್ನು ದಿನಾಂಕ 28-07-2011 ರಂದು ನಿಡಿ-12 ರಂತೆ ಪಾವತಿ ಮಾಡಿರುತ್ತೇನೆ. ಪಿರ್ಯಾದಿದಾರರಿಂದ ದಿನಾಂಕ 15-03-2011 ರಲ್ಲಿ ಪಡೆದ ಹಣದಿಂದ ಸದರಿ ತೆರಿಗೆ ಪಾವತಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಖಾತೆಯಲ್ಲಿ ಸಾಕಷ್ಟು ಹಣ ಇರಿಸದೇ ಪಿರ್ಯಾದಿದಾರರಿಗೆ ಚೆಕ್ ನೀಡಿ ಅಪರಾದ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅಪರಾದದಿಂದ ತಪ್ಪಿಸಿಕೊಳ್ಳುವ ಸಲುವಾಗಿ ನಾನು ಸುಳ್ಳು ದಾಖಲೆಗಳನ್ನು ನೀಡಿ ಸುಳ್ಳು ಸಾಕ್ಷ್ಯ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ಉಗ್ರಪ್ಪ ಮತ್ತು ಪಿರ್ಯಾದಿದಾರರಿಗೂ ಯಾವುದೇ ಸಂಬಂದವಿಲ್ಲದೇ ಇದ್ದರೂ ಸಹ ಅನಾವಶ್ಯಕವಾಗಿ ಅವರನ್ನು ಈ ಪ್ರಕರಣದಲ್ಲಿ ತಂದಿರುತ್ತೇನೆ ಎಂದರೆ ಸರಿಯಲ್ಲ. ಪಿರ್ಯಾದಿದಾರರೇ ಉಗ್ರಪ್ಪನವರ ವಿರುದ್ದ ಗೌರಿಬಿದನೂರು ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಮಾಡಿದ್ದಾರೆ ಎಂದರೆ ಸರಿಯಲ್ಲ, ಪಿರ್ಯಾದಿದಾರು ರಾಮಕ್ರಿಷ್ಣಪ್ಪ ಎಂಬುವವರ ವಿರುದ್ದ ಪ್ರಕರಣ ದಾಖಲು ಮಾಡಿರುವ ಬಗ್ಗೆ ಮಾತ್ರ ನನಗೆ ಗೊತ್ತು .

7. ನೀವೆ ಹಾಜರುಪಡಿಸಿರುವ ನಿಡಿ-12 ರಂತೆ ಉಗ್ರಪ್ಪನವರು ಈ ಪ್ರಕರಣದ ಪಿರ್ಯಾದಿದಾರರ ವಿರುದ್ದ ದಾವೆ ಹೂಡಿರುತ್ತಾರೆ ಎಂದರೆ ಸಾಕ್ಷಿಯು ದಾವೆ ಯಾರ ಮೇಲೆ ಹೂಡಿದ್ದಾರೆ ಎಂದು ನನಗೆ ಗೊತ್ತಿಲ್ಲ, ಹಣ ನೀಡುವಾಗ ದಾಖಲೆ ಪಡೆಯಬೇಕು ಎಂಬುದನ್ನು ತೋರಿಸುವ ಸಲುವಾಗಿ ಮಾತ್ರ ನಾನು ನಿಡಿ-12 ಅನ್ನು ಹಾಜರುಪಡಿಸಿರುತ್ತೇನೆ. ನಿಡಿ-12 ದಾಖಲೆಯ ವಿವರಗಳನ್ನು ನಾನು ತಿಳಿದುಕೊಂಡಿರುವುದಿಲ್ಲ. 2006-2007 ನೇ ಸಾಲಿನಲ್ಲಿನ ವ್ಯವಹಾರಕ್ಕೆ ಸಂಬಂದಿಸಿದಂತೆ ಸದರಿ ದಾವೆ ಹಾಕಲಾಗಿದೆ ಎಂದರೆ ಸಾಕ್ಷಿಯು 2011 ನೇ ಸಾಲಿಗಿಂತಲೂ

ಮುಂಚೆಯಿಂದ ಪಿರ್ಯಾದಿದಾರರಿಗೆ ಹಣ ನೀಡುವಾಗ ದಾಖಲೆ ಪಡೆಯಬೇಕು ಎಂಬ ತಿಳುವಳಿಕೆ ಇತ್ತು ಎಂದು ತೋರಿಸುವ ಸಲುವಾಗಿ ಹಾಜರು ಪಡಿಸಿರುತ್ತೇನೆ. ಪಿರ್ಯಾದಿದಾರರಿಂದ ಪಡೆದ ಹಣ ವಾಪಸ್ಸು ನೀಡುವ ಸಲುವಾಗಿ ನಾನು ಪಿರ್ಯಾದಿದಾರರಿಗೆ ಚೆಕ್ ನೀಡಿದ್ದು ಎಂದರೆ ಸರಿಯಲ್ಲ. ನಾನು ಪಿರ್ಯಾದಿದಾರರಿಂದ ಯಾವುದೇ ಹಣ ಪಡೆದಿರುವುದಿಲ್ಲ.

ಮರುವಿಚಾರಣೆಃ ಇಲ್ಲ

**(<u>ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಗಣಕೀಕೃತಗೊಳಿಸಲಾಯಿತು</u>)**

ಓ.ಹೇ.ಕೇ.ಸ.ಇದೆ.

ಸಿ ಜೆ ಮತ್ತು ಜೆ ಎಂ ಎಫ್ ಸಿ,
ಗುಡಿಬಂಡೆ,